| ಸಂ | ಶ್ರೀ/ಶ್ರೀಮತಿ | ಹುದ್ದೆ | ಜನ್ಮ ದಿನಾಂಕ | ವಿದ್ಯಾರ್ಹತೆ | ವೇತನ ಶ್ರೇಣಿ | ಮೀಸಲಾತಿ |
|---|---|---|---|---|---|---|
| 01 | ರೇಣುಕಯ್ಯ ಕೆ | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 11-02-1973 | ಎಂ.ಕಾಂ., ಎಂ.ಫಿಲ್., ಎನ್.ಇ.ಟಿ | ರೂ.15600 - 39100 + ಎಜಿಪಿ 6000 | ಪ.ಜಾ |
| 02 | ನೀಲಕಂಠ | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 08-09-1973 | ಎಂ.ಕಾಂ., ಎನ್.ಇ.ಟಿ | ರೂ.15600 - 39100 + ಎಜಿಪಿ 6000 | ಪ.ಪಂ |
| 03 | ನರಸಿಂಹನ್ ಜಿ ಬಿ | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | 06-05-1986 | ಎಂ.ಫಿಲ್., ಎನ್.ಇ.ಟಿ | ರೂ.15600 39100 + ಎಜಿಪಿ 6000 | ಜಿ.ಎಂ |

**ಷರತ್ತುಗಳು:**

1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಸಿಸಿ/79, ದಿ:03-10-1981 ಮತ್ತು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ಮತ್ತು ಹೊರಡಿಸುವ ತಿದ್ದುಪಡಿ ಹಾಗೂ ಸ್ಪಷ್ಟೀಕರಣಕ್ಕೆ ಅನುಗುಣವಾಗಿ ನಿಗದಿಪಡಿಸಿದ ಕಾರ್ಯಭಾರವನ್ನು ಹೊಂದಿರತಕ್ಕದ್ದು. ಅಲ್ಲದೆ ಮುಂದೆ ಸರ್ಕಾರ ವಿಧಿಸಬಹುದಾದ ಷರತ್ತುಗಳಿಗೆ ಈ ನೇಮಕಾತಿ ಒಳಪಟ್ಟಿರುತ್ತದೆ.
2) ಸದರಿ ಅಭ್ಯರ್ಥಿಗಳಿಗೆ ವೇತನ ಶ್ರೇಣಿಗಳನ್ನು ಸರ್ಕಾರದ ಆದೇಶ ಸಂಖ್ಯೆ : ಇಡಿ/37/ಯುಎನಿ/2009, ದಿನಾಂಕ:24-12-2009ರ ನಿಯಮ 7ರಲ್ಲಿರುವ ಉಪನಿಯಮ (viii) & (ix) ರಲ್ಲಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3) ಸದರಿ ಅಭ್ಯರ್ಥಿಗಳ ನೇಮಕಾತಿಯು ಈ ಆದೇಶದ ದಿನಾಂಕದ ನಂತರ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಯಾವುದೇ ಹಿಂದಿನ ವೇತನ ಬಾಕಿಗೆ ಅರ್ಹತೆ ಹೊಂದಿರುವುದಿಲ್ಲ.
4) ಸದರಿಯವರ ನೇಮಕಾತಿಯು ಸೇವಾ ವಿವರಗಳು ಕಾಲೇಜಿನ ಸ್ಥಳೀಯ ಲೆಕ್ಕ ಪತ್ರ ತನಿಖಾ ಸಮಯದಲ್ಲಿ ಪರಿಶೀಲನೆಗೆ ಒಳಪಟ್ಟಿರುತ್ತದೆ. ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾಲೇಜಿಗೆ ನೀಡುತ್ತಿರುವ ಅನುದಾನವನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಕಾಯ್ದಿರಿಸಿದೆ.
5) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
6) ಮೇಲ್ಕಂಡ ಅಭ್ಯರ್ಥಿಗಳಿಗೆ ಅವರು ಕೆಲಸಕ್ಕೆ ಹಾಜರಾದ ನಂತರ ಸರ್ಕಾರಿ ಆದೇಶ ಸಂಖ್ಯೆ : FD (Spl)04/PET/2005 ದಿನಾಂಕ:31-03-2006ರಲ್ಲಿ ಪ್ರಕಟಿತವಾಗಿರುವ New Defined Contributory Pension ಅನ್ವಯವಾಗುತ್ತದೆ.
7) ಈ ನೇಮಕಾತಿಯು ಪೋಲೀಸ್ ಇಲಾಖೆಯಿಂದ ಪಡೆಯುವ ವರದಿಯ ಷರತ್ತಿಗೆ ಒಳಪಟ್ಟಿರುತ್ತದೆ.
8) ಕ್ರಮ ಸಂಖ್ಯೆ (1) ಮತ್ತು(2)ರಲ್ಲಿನ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸುವ ಷರತ್ತಿಗೊಳಪಟ್ಟಿದೆ.

ಪ್ರಾಂಶುಪಾಲರು
ಪಿ.ಇ.ಎಸ್. ವಿಜ್ಞಾನ, ಕಲಾ
ಮತ್ತು ವಾಣಿಜ್ಯ ಕಾಲೇಜು, ಮಂಡ್ಯ

ಜಂಟಿ ನಿರ್ದೇಶಕರು 3/12
ಪ್ರಾದೇಶಿಕ ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,
ಮೈಸೂರು - 570 005.

ಪ್ರತಿ:

1) ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ಅಧ್ಯಕ್ಷರು, ಜನತಾ ಶಿಕ್ಷಣ ಟ್ರಸ್ಟ್ (ರಿ), ಮಂಡ್ಯ.
3) ಪ್ರಾಂಶುಪಾಲರು, ಪಿ.ಇ.ಎಸ್ ವಿಜ್ಞಾನ ಕಾಲೇಜು, ಮಂಡ್ಯ – ಮಾಹಿತಿಗಾಗಿ
4) ಕಛೇರಿ ಪ್ರತಿ.

1780

ದೂರವಾಣಿ ಸಂಖ್ಯೆ :0821-2426696/24227
ಫ್ಯಾಕ್ಸ್ ಸಂಖ್ಯೆ :0821-2428696
ಇ-ಮೇಲ್: jdir_cce_kamy@yahoo.com

ಕಾಲೇಜು ಶಿಕ್ಷಣ ಇಲಾಖೆ

## ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು, ಇವರ ನಡವಳಿಗಳು.

ವಿಷಯ : ಮಂಡ್ಯದ ಜನತಾ ಶಿಕ್ಷಣ ಟ್ರಸ್ಟ್ (ರಿ), ಇವರ ವ್ಯಾಪ್ತಿಯಲ್ಲಿ ಬರುವ ಪಿ.ಇ.ಎಸ್ ಕಾಲೇಜು, ಮಂಡ್ಯ, ಇಲ್ಲಿ ಖಾಲಿ ಇರುವ ಹುದ್ದೆಗೆ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಹೊಂದಿದ ಉಪನ್ಯಾಸಕರ ನೇಮಕಾತಿ ಅನುಮೋದಿಸುವ ಬಗ್ಗೆ.

ಉಲ್ಲೇಖ :1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿ:03-10-1981 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಸರ್ಕಾರದ ಆದೇಶ ಸಂಖ್ಯೆ: ಇಡಿ/37/ಯುಎನಿ/2009, ದಿ:24-12-2009.
3) ಸರ್ಕಾರದ ಪತ್ರ ಸಮಖ್ಯೆ:ಇಡಿ/26/ಯುಪಿಸಿ/2012, ದಿನಾಂಕ:31-11-2012.
4) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ದಿನಾಂಕ:26-12-2012ರ ಆದೇಶ ಸಂಖ್ಯೆ: ಕಾಶಿಇ/೨೫/ಖಾಹುಭ/ಖಾಕಾವಿ-1/ನೇ.ಪಿ.(ಭಾಗ-2), ಬೆಂಗಳೂರು, ದಿನಾಂಕ: 26-12-2012.

**********

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮಂಡ್ಯದ ಜನತಾ ಶಿಕ್ಷಣ ಟ್ರಸ್ಟ್ (ರಿ), ಇವರ ವ್ಯಾಪ್ತಿಯಲ್ಲಿ ಬರುವ ಪಿ.ಇ.ಎಸ್ ಕಾಲೇಜು, ಮಂಡ್ಯ, ಇಲ್ಲಿಗೆ ಮಂಜೂರಾದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖಿತ ಆದೇಶಗಳಲ್ಲಿ ಅನುಮತಿ ನೀಡಲಾಗಿದ್ದು, ಅದರಂತೆ ಆಡಳಿತ ಮಂಡಳಿ ಜಾಹೀರಾತು ಪ್ರಕಟಿಸಿ, ಆಯ್ಕೆ ಸಮಿತಿಯ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುತ್ತಾರೆ. ಆಡಳಿತ ಮಂಡಳಿ ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ನಿಗದಿತ ವಯೋಮಿತಿ ಹಾಗು ವಿದ್ಯಾರ್ಹತೆಯನ್ನು ಹೊಂದಿರುವ ಕಾರಣ ಅವರ ನೇಮಕಾತಿಯನ್ನು ಉಲ್ಲೇಖ (4) ರಲ್ಲಿ ಕಾಲೇಜು ಶಿಕ್ಷಣ ಆಯುಕ್ತರು ಅನುಮೋದಿಸಿ ಆದೇಶ ನೀಡಿರುವುದರಿಂದ ಈ ಆದೇಶ.

**ಆದೇಶ ಸಂಖ್ಯೆ: ಪ್ರಾಕಮೈ/ಕಾಶಿಇ/೦೫/ಖಾಹುಭ/ಜಶಿಟ್ರ.ಮಂಡ್ಯ/2011, ಮೈಸೂರು, ದಿನಾಂಕ:31-12-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮಂಡ್ಯದ ಜನತಾ ಶಿಕ್ಷಣ ಟ್ರಸ್ಟ್ (ರಿ), ಇವರ ವ್ಯಾಪ್ತಿಯಲ್ಲಿ ಬರುವ ಪಿ.ಇ.ಎಸ್ ಕಾಲೇಜು, ಮಂಡ್ಯ, ಇಲ್ಲಿ ಮಂಜೂರಾದ 03 ವಾಣಿಜ್ಯಶಾಸ್ತ್ರ ಉಪನ್ಯಾಸಕರ ಹುದ್ದೆಗಳಿಗೆ ಆಡಳಿತ ಮಂಡಳಿ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿಕೊಂಡಿರುವ ಈ ಕೆಳಕಂಡ ಅಭ್ಯರ್ಥಿಗಳ ನೇಮಕಾತಿಯನ್ನು ಅವರುಗಳ ಹೆಸರಿನ ಮುಂದೆ ತಿಳಿಸಿರುವ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದೆ.